**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 25-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 85/2024

CW-4 PW-3

| | | |
|---|---|---|
| ಸಾಕ್ಷಿದಾರರ ಹೆಸರು | - | ರಮೇಶ ಮುರನಾಳೆ |
| ವಯಸ್ಸು | - | 33 ವರ್ಷ |
| ಉದ್ಯೋಗ | - | ಪೋಲಿಸ ಕಾನಸ್ಟೇಬಲ್ |
| ಸಾಕೀನ | - | ಖಡಕಲಾಟ |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು ದಿಃ 03-10-2019 ರಿಂದ 03-08-2023 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 23-03-2023 ರಂದು ನಾನು ಬೆಳಿಗ್ಗೆ 11-00 ಗಂಟೆಗೆ ಠಾಣೆಯಲ್ಲಿದ್ದಾಗ ಚಾಸಾ 1 ರವರ ಆದೇಶದ ಮೇರೆಗೆ ನಾನು ಹಾಗೂ ಚಾಸಾ 5,6 ರವರು ಸೇರಿ ಸರಾಯಿ ಮರಾಟ ಮಾಡಲು ಒಯ್ಯುತ್ತಿರುವ ಮಾಹಿತಿ ಮೇರೆಗೆ ಚಾಸಾ 1 ರವರ ಜೊತೆ ಎ ಪಿ ಎಮ್ ಸಿ 1 ನೇ ಗೇಟಗೆ ಹೋಗಿದ್ದು , ಅಲ್ಲಿ ಟಿ ವಿ ಎಸ್ ಮೋಟಾರ ಸೈಕಲ್ ನಂಬರ ಕೆಎ-49/ ಎಚ್ 2061 ರಲ್ಲಿ ಬಿಳಿ ಗೊಬ್ಬರ ಚೀಲದಲ್ಲಿ ಸರಾಯಿ ಪಾಕೇಟಗಳನ್ನು ತುಂಬಿಕೊಂಡು ಬರುತ್ತಿದ್ದ ವಾಹನವನ್ನು ನಿಲ್ಲಿಸಿ ತಪಾಸಿಸಿದಾಗ ಅದರಲ್ಲಿ ಒರಿಜನಲ್ ಚಾಯಿಸ್ ವಿಸ್ಕಿ 90 ಎಮ್ ಎಲ್ ನ 245 ಟೆಟ್ರಾ ಪ್ಯಾಕಗಳು ಇದ್ದು, ವಿಸ್ಕಿ ಬ್ಯಾಗ್ ಪೈಪರನ 180 ಎಮ್ ಎಲ್ ನ 12 ಟೆಟ್ರಾ ಪ್ಯಾಕಗಳು, ಓಲ್ಡ ಟವರಿನ ವಿಸ್ಕಿಯ 180 ಎಮ್ ಎಲ್ ನ 37 ಟೆಟ್ರಾ ಪ್ಯಾಕಗಳು ಇದ್ದು, ಅವುಗಳನ್ನು ಮಾರಾಟ ಮಾಡುವ ಅಧೀಕೃತ ಪರವಾನಿಗೆಯನ್ನು ಕೇಳಿದಾಗ ಅದನ್ನು ಒಯ್ಯುತ್ತಿದ್ದ ವ್ಯಕ್ತಿ ಪರವಾನಿಗೆ ಇರುಕವುದಿಲ್ಲ ಎಂದು

ತಿಳಿಸಿದ್ದು, ಅವರ ಹೆಸರನ್ನು ವಿಚಾರಿಸಲಾಗಿ ತನ್ನ ಹೆಸರು ದುಂಡಪ್ಪಾ ನಿಂಗಪ್ಪಾ ಕೊಳವಿ , ಸಾಃ ಉಪ್ಪಾರಹಟ್ಟಿಯವರು ಎಂದು ಮಾಹಿತಿ ನೀಡಿದ್ದು , ಅಲ್ಲಿ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಸದರಿ ಮದ್ಯವನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ತಯಾರಿಸಿ ಸಾಕ್ಷಿಯ ಸಹಿಗಳನ್ನು ಪಡೆದುಕೊಂಡೆವು. ಅದರಲ್ಲಿ 3 ಬಗೆಯ ಮದ್ಯದಲ್ಲಿ ತಲಾ ಒಂದೊಂದು ಪಾಕೇಟಗಳನ್ನು ಪರೀಕ್ಷೆಗಾಗಿ ಮಾದರಿಯನ್ನಾಗಿ ತೆಗೆದುಕೊಂಡಿದ್ದು, ನಂತರ ಠಾಣೆಗೆ ಬಂದು ಈ ಕುರಿತು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಮೂರು ಜಪ್ತಾದ ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ ಮುದ್ದೆಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1) ಚಾಸಾ 1 ರವರಿಗೆ ಮಾಹಿತಿ ಬಂದಾಗ ಸಮಯ 11-00 ಗಂಟೆ ಆಗಿದ್ದು, ಅದೇ ಸಮಯದಲ್ಲಿಯೇ ಚಾಸಾ 1 ರವರು ನಮಗೂ ಸಹ ಮಾಹಿತಿ ನೀಡಿರುತ್ತಾರೆ. ಸ್ಥಳಕ್ಕೆ ಪಂಚರನ್ನು ನಾವೇ ಸಂಗೋಳ್ಳಿ ರಾಯಣ್ಣಾ ವೃತ್ತದಲ್ಲಿರುವವರನ್ನು ಕರೆದುಕೊಂಡು ನೇರವಾಗಿ ಘಟನಾ ಸ್ಥಳಕ್ಕೆ ಬಂದಿರುತ್ತೇವೆ. ಪಂಚರಿಗೆ ಮಾಹಿತಿಯನ್ನು ಚಾಸಾ 1 ರವರೇ ನೀಡಿರುತ್ತಾರೆ. ಸಾಕ್ಷಿ ಮರುಹೇಳುವುದೇನೆಂದರೆ ಚಾಸಾ 1 ರವರು ಪಂಚರಿಗೆ ಮಾಹಿತಿ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಪಂಚರಿಗೆ ನೋಟಿಸ ನೀಡಿರುವುದಿಲ್ಲ. ನಾನು, ಚಾಸಾ 5,6 ಹಾಗೂ ಚಾಸಾ 1 ರವರು ಸೇರಿ ನಮ್ಮ ಠಾಣಾ ವಾಹನದಲ್ಲಿಯೇ ಹೋಗಿರುತ್ತೇವೆ.

2) ನಮ್ಮ ಠಾಣೆಯಿಂದ ಘಟನಾ ಸ್ಥಳ ಸುಮಾರು 1.5 ಕಿ.ಮೀ ದೂರ ಇದ್ದು, ಸುಮಾರು 15 ನಿಮಿಷ ಸಮಯ ಬೇಕಾಗುತ್ತದೆ. ನಾವು ಸ್ಥಳಕ್ಕೆ ಹೋದಾಗ ಸಮಯ 11-15 ಗಂಟೆ

ಆಗಿತ್ತು. ನಾವು ಸ್ಥಳಕ್ಕೆ ಹೋಗಿ ಸುಮಾರು 15 ನಿಮಿಷ ಕಾಯ್ದಿದ್ದರುತ್ತೇವೆ. ನಾವು ಕಾಯುತ್ತಿದ್ದ ಸ್ಥಳದ ಚೆಕಬಂದಿ ಪೂಃ ಎಸ್ 4 ಆಸ್ಪತ್ರೆ, ಪಃ ಕೋಳಿಕೂಟ ವೃತ್ತ, ಉಃ ಹಣಮಂತ ದೇವಸ್ಥಾನ, ದಃ ಎ ಪಿ ಎಮ್ ಸಿ ಇರುತ್ತದೆ. ನಾವು ಕಾಯುತ್ತಿದ್ದ ಸ್ಥಳ ಹಾಗೂ ರೇಡ ಮಾಡಿದ ಸ್ಥಳಕ್ಕೆ 5 ಅಡಿ ಅಂತರವಿತ್ತು. ರೇಡ ಮಾಡಿದಾಗ ಸಮಯ ಸುಮಾರು 11-30 ಗಂಟೆ ಆಗಿತ್ತು. ಪಂಚನಾಮೆಯನ್ನು ಲ್ಯಾಪಟಾಪನಲ್ಲಿ ಬೆರಳಚ್ಚು ಮಾಡಿರುತ್ತೇವೆ.

3) ನಾವು ಠಾಣೆಗೆ ಮರಳಿ ಬಂದಾಗ ಸಮಯ 1-00 ಗಂಟೆ ಆಗಿತ್ತು. ರೇಡ ಮಾಡಿದ ಸ್ಥಳವು ಜನನಿಬಿಡ ಪ್ರದೇಶವಾಗಿರುತ್ತದೆ ಎಂದರೆ ಸರಿ. ಸ್ಥಳದಲ್ಲಿದ್ದ ಸಾರ್ವಜನಿಕರನ್ನು ಪಂಚರನ್ನಾಗಿ ಬರಮಾಡಿಕೊಂಡಿರುವುದಿಲ್ಲ. ಆರೋಪಿ ಮಧ್ಯವನ್ನು ಸಾಗಿಸುತ್ತಿರಲಿಲ್ಲ, ನಾವು ರೇಡ ಮಾಡಿರುವುದಿಲ್ಲ, ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದ ಚೆಕಬಂದಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಂಚರನ್ನು ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿಲ್ಲದಿದ್ದರೂ ಅವರ ಖಾಲಿ ವಾಹನವನ್ನು ಜಪ್ತು ಮಾಡಿ, ನಮ್ಮ ಠಾಣೆಯ ಪ್ರಕರಣಗಳ ಅಂಕಿ ಅಂಶಗಳಿಗೋಸ್ಕರ, ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.